# ನಿವೇದಿತಾ ವಿದ್ಯಾಲಯ ಹಾಗೂ ಭಗಿನಿ ಸುಧೀರಾ

❑ ಪ್ರವ್ರಾಜಿಕಾ ಪರಮಪ್ರಾಣಾ

**ಸ್ವಾಮಿ ವಿವೇಕಾನಂದರ ಅದ್ಭುತ ಕನಸಾದ ಮಹಿಳಾ ಸಂನ್ಯಾಸಿನಿಯರ ಮಠದ ಆರಂಭಪೂರ್ವದಲ್ಲಿ ಅವರ ಕನಸನ್ನು ನನಸುಗೊಳಿಸುವ ಮಹತ್ವಾಕಾಂಕ್ಷೆಯನ್ನು ಹೊತ್ತ ಧೀರ ಮಹಿಳೆ ಭಗಿನಿ ಸುಧೀರಾದೇವಿ. ಕೊಲ್ಕತಾದ ನಿವೇದಿತಾ ವಿದ್ಯಾಲಯದೊಂದಿಗೆ ಹಾಸುಹೊಕ್ಕಾಗಿದ್ದ ಆಕೆಯ ಅಪೂರ್ವ ವ್ಯಕ್ತಿತ್ವದ ಒಂದು ಸುಂದರ ಚಿತ್ರಣವನ್ನು ಹೃದಯವನ್ನು ತಟ್ಟುವಂತೆ ನಿರೂಪಿಸಿರುವ ಪ್ರವ್ರಾಜಿಕಾ ಪರಮಪ್ರಾಣಾ ಅವರು ದಕ್ಷಿಣೇಶ್ವರದ ಶ್ರೀಶಾರದಾ ಮಠದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.**

ಒಂದು ನಾಟಕೀಯ ಘಟನೆಯ ಮೂಲಕ ನಿವೇದಿತಾ ವಿದ್ಯಾಲಯ ಆರಂಭವಾಯಿತು. ೧೮೯೮ರ ನವೆಂಬರ್ ೧೨ರಂದು ಸಂಜೆ ಬಾಗ್‌ಬಜಾರಿನ ಬಲರಾಮ ಬಸುವಿನ ಮನೆಯಲ್ಲಿ ಒಂದು ಸಭೆಯನ್ನು ಕರೆಯಲಾಗಿತ್ತು. ಭಾರತದ ಸಂಸ್ಕೃತಿ ಹಾಗೂ ಆಧ್ಯಾತ್ಮಿಕತೆಯ ತಳಹದಿಯ ಮೇಲೆ ಆಧುನಿಕ ಶಿಕ್ಷಣ ಕೊಡಬೇಕೆಂಬ ಸ್ವಾಮಿ ವಿವೇಕಾನಂದರ ಇಚ್ಛೆಗೆ ಅನುಗುಣವಾಗಿ ಮಹಿಳೆಯರಿಗಾಗಿ ಒಂದು ಶಾಲೆಯನ್ನು ತೆರೆಯುವ ನಿವೇದಿತಾರ ಪ್ರಯತ್ನ ವಿಫಲವಾಗುವ ಹಂತಕ್ಕೆ ತಲುಪಿತ್ತು. ಆದ್ದರಿಂದ ನಿವೇದಿತಾ ಆರಂಭಿಸಿದ ವಿದ್ಯಾಲಯಕ್ಕೆ ತಮ್ಮ ಮಕ್ಕಳನ್ನು ಕಳುಹಿಸುವಂತೆ ತಂದೆತಾಯಿಯರನ್ನು ಪ್ರೇರೇಪಿಸುವುದೇ ಸಭೆಯ ಉದ್ದೇಶವಾಗಿತ್ತು.

೨೫.೩.೧೮೯೮ರ ಶುಕ್ರವಾರ ಐರಿಶ್ ಮಹಿಳೆ ಮಾರ್ಗರೆಟ್ ತಮ್ಮನ್ನು ಭಾರತೀಯರನ್ನಾಗಿ ಪರಿವರ್ತಿಸಿಕೊಳ್ಳುವ ಮೊದಲ ಹೆಜ್ಜೆಯಾಗಿ ಸ್ವಾಮಿ ವಿವೇಕಾನಂದರಿಂದ ಬ್ರಹ್ಮಚರ್ಯ ದೀಕ್ಷೆಯನ್ನು ಪಡೆದು 'ನಿವೇದಿತಾ' ಆಗಿದ್ದರು. ಮಾರ್ಗರೆಟ್ ನಿವೇದಿತಾ ಆದರೂ, ಶ್ರೀಮಾತೆ ಶಾರದಾದೇವಿ ಆಕೆಗೆ ಆಶ್ರಯವಿತ್ತಿದ್ದನ್ನು ಕಂಡೂ, ತಮ್ಮ ಹೆಣ್ಣು ಮಕ್ಕಳನ್ನು ಈ 'ಮೇಮ್ ಸಾಹಿಬ್' ಆರಂಭಿಸುವ ಶಾಲೆಗೆ ಕಳುಹಿಸಲು ರಾಮಕೃಷ್ಣರ ಗೃಹಸ್ಥ ಶಿಷ್ಯರೇ ಹಿಂದೇಟು ಹಾಕುತ್ತಿದ್ದರು. ಬಹಳ ಕಟ್ಟುಪಾಡುಗಳಿಂದ ಕೂಡಿದ ಅಂದಿನ ಆ ಸಮಾಜ ಸುಲಭವಾಗಿ ಹೊಸದನ್ನು ಸ್ವೀಕರಿಸಲು ಒಪ್ಪಲಿಲ್ಲ. ಸ್ವಾಮೀಜಿ ಹಿಂಜರಿಯುವ ವ್ಯಕ್ತಿಯಲ್ಲ. ಆ ದಿನದ ಸಂಜೆಯ ಸಭೆಗೆ ರಾಮಕೃಷ್ಣರ ಅನುರಾಗಿಗಳನೇಕರನ್ನು ಆಹ್ವಾನಿಸಲಾಗಿತ್ತು. ವಚನವೇದದ ಲೇಖಕರಾದ ಮಹೇಂದ್ರನಾಥ ಗುಪ್ತ, ಸುರೇಶ್ ದತ್ತ, ಹರಮೋಹನ ಮಿತ್ರ ಮೊದಲಾದ ವಿಶಿಷ್ಟ ವ್ಯಕ್ತಿಗಳು ಅಲ್ಲಿ ಸೇರಿದ್ದರು. ಸಭಾಮಂದಿರ ತುಂಬಿ ಎಲ್ಲರೂ ಕುಳಿತ ಮೇಲೆ ಯಾರಿಗೂ ತಿಳಿಯದಂತೆ ಅಲ್ಲಿಗೆ ಪ್ರವೇಶಿಸಿದ ಸ್ವಾಮೀಜಿ ನಿಶ್ಶಬ್ದವಾಗಿ ಸಭೆಯ ಹಿಂಭಾಗದಲ್ಲಿ ಕುಳಿತರು.

ನಿವೇದಿತಾ ಇಂಗ್ಲಿಷಿನಲ್ಲಿ ಒಂದು ಪುಟ್ಟ ಭಾಷಣವನ್ನು ಮಾಡಿ, ಸ್ತ್ರೀಶಿಕ್ಷಣದ ಅಗತ್ಯವನ್ನು ವಿವರಿಸಿ, "ನಿಮ್ಮ ಹೆಣ್ಣು ಮಕ್ಕಳನ್ನು ನನ್ನ ಶಾಲೆಗೆ ಕಳಿಸಿ" ಎಂದು ವಿನೀತಳಾಗಿ ಬೇಡಿಕೊಂಡರು. ಸಭೆಯಿಂದ ಯಾವ ಪ್ರತಿಕ್ರಿಯೆಯೂ ಬಾರದಿರುವುದನ್ನು ಕಂಡು ಸ್ವಾಮೀಜಿ ಅವರಿವರನ್ನು ತಿವಿದು ಪಿಸುಗುಟ್ಟುತ್ತಾ ಹುರಿದುಂಬಿಸಲಾರಂಭಿಸಿದರು: "ಏಯ್ ಏಳು. ಏಳೋ ಬೇಗ. ಹುಡುಗಿಯ ಅಪ್ಪನಾದರೆ ಆಗಿಹೋಯಿತೇ? ಅವರುಗಳಿಗೆ ವಿದ್ಯಾಭ್ಯಾಸ ನೀಡಬೇಡವೇ? ಎದ್ದು ಹೇಳು 'ನನ್ನ ಮಗಳನ್ನು ನಿಮ್ಮ ಸ್ಕೂಲಿಗೆ ಕಳಿಸುತ್ತೇನೆ' ಎಂದು." ಇಷ್ಟಾದರೂ ಯಾರೂ ಎದ್ದು ಮಾತನಾಡುವ ಸಾಹಸ ಮಾಡದಿರುವುದನ್ನು ಕಂಡು ಸ್ವಾಮೀಜಿ ಅತ್ತಿತ್ತ ನೋಡುತ್ತಿದ್ದಂತೆ ಅವರ ದೃಷ್ಟಿ ಗೆಳೆಯ ಹರಮೋಹನನತ್ತ ಬಿದ್ದಿತು. ಕೂಡಲೆ ಅವರು ಅವನನ್ನು ಗದರಿಸುತ್ತಾ ಒತ್ತಾಯಿಸಲಾರಂಭಿಸಿದರು, "ಹರಮೋಹನ್, ನಿನ್ನ ಮಗಳನ್ನು ಸ್ಕೂಲಿಗೆ ಸೇರಿಸಲೇಬೇಕು. ಎದ್ದೇಳು...." ಹರಮೋಹನ್ ಅಲ್ಲಾಡಲಿಲ್ಲ. ಆಗ ಸ್ವಾಮೀಜಿ ಥಟ್ಟನೆ ಎದ್ದು ಅವನ ಭುಜವನ್ನು ಒತ್ತಿ ಮೇಲೆ ಎಳೆದು, ಅವನನ್ನು ನಿಲ್ಲಿಸಿ ತಾವೇ ಜೋರಾಗಿ ಘೋಷಿಸಿಬಿಟ್ಟರು, "Well, Miss Noble, this gentleman offers his girl to you." (ಮಿಸ್. ನೋಬೆಲ್ ಅವರೇ, ನಿಮ್ಮ ಕೋರಿಕೆಯಂತೆ, ಈ ಮಹಾಶಯ ತನ್ನ ಮಗಳನ್ನು ನಿಮಗೆ ಅರ್ಪಿಸುತ್ತಾನೆ). ನಿವೇದಿತಾಳ ಆನಂದಕ್ಕೆ ಪಾರವಿಲ್ಲದಾಯಿತು. ಆಕೆ ಚಪ್ಪಾಳೆ ತಟ್ಟುತ್ತಾ ಹರಮೋಹನನಿಗೆ ಅಭಿನಂದನೆ ಸಲ್ಲಿಸಲಾರಂಭಿಸಿದರು.

೧೩.೧೧.೧೮೯೮ರ ಕಾಳಿಪೂಜೆಯ (ದೀಪಾವಳಿ) ದಿನ ನಿವೇದಿತಾರ ಸಣ್ಣ ಶಾಲೆ ಆರಂಭವಾಯಿತು. ಆ ದಿವಸ ಶ್ರೀಮಾತೆ ಶಾರದಾದೇವಿಯವರು ಶಾಲೆಯ ಕಟ್ಟಡದಲ್ಲಿ ಪೂಜೆಯನ್ನು ಮಾಡಿ, "ಈ ವಿದ್ಯಾಲಯದ ವಿದ್ಯಾರ್ಥಿನಿಯರ ಮೇಲೆ ಜಗನ್ಮಾತೆಯ ಕೃಪೆ ವರ್ಷಿಸಲಿ" ಎಂದು ಪ್ರಾರ್ಥಿಸಿದರು. ಆಗ ಅಲ್ಲಿ ಆ ಪ್ರಾರ್ಥನೆಯಲ್ಲಿ ಸ್ವಾಮಿ ವಿವೇಕಾನಂದರು, ಬ್ರಹ್ಮಾನಂದರು ಹಾಗೂ ಶಾರದಾನಂದರು ಭಾಗಿಗಳಾಗಿದ್ದರು. ಈ ಶಾಲೆ ಕೇವಲ ಸಣ್ಣ ಮಕ್ಕಳಿಗೆ ಮಾತ್ರವಲ್ಲ, ಅಂದಿನ ಸಮಾಜ ಪೂರ್ತಿಯಾಗಿ ಅಂಧಕಾರದಲ್ಲಿ ಇಟ್ಟಿದ್ದ ವಿವಾಹಿತ ಮಹಿಳೆಯರು ಹಾಗೂ ವಿಧವೆಯರಿಗೂ ಅಕ್ಷರಾಭ್ಯಾಸವನ್ನು ಮಾಡಿಸುವ ಸಾಹಸಕ್ಕೆ ಇಳಿಯಿತು. ನಿವೇದಿತಾ ಬಾಲವಿಧವೆಯರನ್ನು ತನ್ನ ಶಾಲೆಗೆ ಕಳುಹಿಸುವಂತೆ ತಂದೆತಾಯಿಗಳ ಪದತಲದಲ್ಲಿ ಮಣಿದು ಬೇಡಿಕೊಂಡ ಘಟನೆಗಳೂ ಇವೆ. ನಿವೇದಿತಾ ಬ್ರಿಟಿಷರ ಪ್ರತಿನಿಧಿಯಾಗಿ ಇಲ್ಲಿಗೆ ಬಂದಿಲ್ಲ, ತಮ್ಮಲ್ಲೇ ಒಬ್ಬಳಾಗಿ ತಮ್ಮ ಸೇವೆ ಮಾಡಲು ಬಂದಿದ್ದಾರೆ ಎಂದು ಅರಿಯಲು ಬಾಗ್‌ಬಜಾರಿನ ಜನತೆಗೆ ಹೆಚ್ಚು ಸಮಯ ಬೇಕಾಗಲಿಲ್ಲ.

ಸಮಾಜದ ಸರ್ವತೋಮುಖ ಬೆಳವಣಿಗೆಯಲ್ಲಿ ಮಹಿಳೆಯರ ಪಾತ್ರಕ್ಕೆ ವಿಶೇಷ ಮಾನ್ಯತೆಯನ್ನು ಕೊಟ್ಟರು ಸ್ವಾಮೀಜಿ. ತ್ಯಾಗ

ಹಾಗೂ ಸೇವೆಯ ಪಥದಲ್ಲಿ ಮಹಿಳೆಯರು ಅಗ್ರಗಾಮಿಗಳಾಗಲು ಶ್ರೀಮಾತೆಯನ್ನು ಕೇಂದ್ರವಾಗಿಟ್ಟುಕೊಂಡು ಒಂದು ಮಠವನ್ನು ಆರಂಭಿಸುವ ಇಚ್ಛೆಯನ್ನು ವ್ಯಕ್ತಪಡಿಸಿ ಸ್ವಾಮೀಜಿ ತಮ್ಮ ಶಿಷ್ಯ ಶರಚ್ಚಂದ್ರ ಚಕ್ರವರ್ತಿಯನ್ನು ದಂಗುಗೊಳಿಸಿದರು. ಆತ ಉದ್ಗರಿಸಿದ್ದನು: "ಸ್ವಾಮೀಜಿ, ಚರಿತ್ರೆಯಲ್ಲಿ ಇದುವರೆಗೂ ಇಂಥದೊಂದು ನಡೆದಿದೆ ಎಂದು ಕೇಳಿಲ್ಲ!....ನಿಮ್ಮ ಈ ಕಲ್ಪನೆ ಒಳ್ಳೆಯದೇ ಇರಬಹುದು. ನೀವು ಮಹಿಳೆಯರಿಗೆ ಒಂದು ಮಠವನ್ನು ಸ್ಥಾಪಿಸಿದರೂ.... ನಮ್ಮ ಈಗಿನ ಸಮಾಜದ ನಿಯಮ, ಸಂಪ್ರದಾಯಗಳನ್ನು ಮೀರಿ ಯಾವ ಗೃಹಸ್ಥನೂ ತನ್ನ ಮಕ್ಕಳನ್ನು ನಿಮ್ಮ ಮಠಕ್ಕೆ ಸೇರಿಸಲು ಒಪ್ಪುವುದಿಲ್ಲ." ಇದಕ್ಕೆ ಸ್ವಾಮೀಜಿಯ ದೃಢವಾದ ಉತ್ತರ: "ಯಾಕೆ ಸಾಧ್ಯವಿಲ್ಲ?... ಶ್ರೀರಾಮಕೃಷ್ಣರ ಗೃಹಸ್ಥ ಭಕ್ತರ ಮಕ್ಕಳು ಇಲ್ಲಿಗೆ ಬಂದು ಸೇರಿಕೊಳ್ಳುತ್ತಾರೆ. ನಾನು ಈ ಕೆಲಸವನ್ನು ಆರಂಭಿಸಿಯೇ ತೀರುತ್ತೇನೆ."

ಸ್ವಾಮೀಜಿಯ ಈ ಮಹಾನ್ ಉದ್ದೇಶದ ಬೀಜಾರೋಪಣದಂತೆ ಆರಂಭವಾಯಿತು ನಿವೇದಿತಾ ವಿದ್ಯಾಲಯ. ಶ್ರೀಮಾತೆ ಶಾರದಾದೇವಿಯವರು ಕೊಲ್ಕತಾಕ್ಕೆ ಬಂದಾಗ ನೆಲೆಸುತ್ತಿದ್ದ ಅವರ ಬಾಗ್‌ಬಜಾರಿನ ಮನೆಯ ಬಳಿಯೇ ಈ ವಿದ್ಯಾಲಯ ಸ್ಥಾಪಿತವಾಗಬೇಕೆಂದು ಸ್ವಾಮೀಜಿಯ ಇಚ್ಛೆಯಾಗಿತ್ತು. ಇದಕ್ಕಾಗಿಯೇ ಆಗ ಸಣ್ಣದೊಂದು ಹಳ್ಳಿಯಂತಿದ್ದ ಬಾಗ್‌ಬಜಾರಿನಲ್ಲಿ ನಿವೇದಿತಾ ತಮ್ಮ ಶಾಲೆಯನ್ನು ಆರಂಭಿಸಿದರು. ಬ್ರಿಟಿಷರ ರಾಜಧಾನಿಯಾಗಿದ್ದ ಕೊಲ್ಕತಾದಲ್ಲಿ ಯೂರೋಪಿನ ಮಹಿಳೆಯೊಬ್ಬಳು ತನ್ನ ಶಾಲೆಗೆ, ಆಗ ಸಂಪ್ರದಾಯವಂತ ಹಿಂದೂ ಕುಟುಂಬಗಳ ವಾಸಸ್ಥಾನವಾಗಿದ್ದ, ಬಾಗ್‌ಬಜಾರಿನ ಸಂಕೀರ್ಣ ಗಲ್ಲಿಯೊಂದರಲ್ಲಿ ಮನೆಯನ್ನು ಆರಿಸಿಕೊಂಡಿದ್ದು ಬಹುಜನ ಬುದ್ಧಿಜೀವಿಗಳನ್ನು ಚಕಿತಗೊಳಿಸಿತು. ಕವಿ ರವೀಂದ್ರನಾಥ ಟಾಗೂರರು ಹೇಳುತ್ತಾರೆ, "ನಿವೇದಿತಾರ ಎಲ್ಲ ಕೆಲಸಗಳೂ ಹೀಗೆಯೇ. ಮೊದಲ ನೋಟಕ್ಕೆ ಕಣ್ಣಿಗೇ ಬೀಳುವುದಿಲ್ಲ... ತಮ್ಮ ಅಸಾಮಾನ್ಯ ಪ್ರತಿಭೆ ಹಾಗೂ ಶಿಕ್ಷಣದ ಅಭಿವ್ಯಕ್ತಿಗೆ ಆಕೆ ಆರಿಸಿಕೊಂಡದ್ದು ಒಂದು ಸಣ್ಣ ಗಲ್ಲಿಯಲ್ಲಿನ ಸಣ್ಣ ಶಾಲೆ! .... ವಿಶಾಲ ವಿಶ್ವಪ್ರಕೃತಿ ತನ್ನೆಲ್ಲ ಶಕ್ತಿಯಿಂದ ಮಣ್ಣಿನ ಕೆಳಗೆ ಹುದುಗಿರುವ ಬೀಜವೊಂದರ ಪಾಲನೆ ಮಾಡಲು ಮರೆಯುವುದಿಲ್ಲ. ಇದೂ ಹಾಗೆಯೇ...." ಮೊದಲು ಅಜ್ಞಾತ, ಕಿರಿದು. ಆದರೆ ಭವಿಷ್ಯದಲ್ಲಿ ಒಂದು ಬೃಹತ್ ಆಕಾರವನ್ನು ತಾಳಿ ಮೇಲೆ ಬರುತ್ತದೆ.

ಸ್ವಾಮೀಜಿಯ ಕೆಲಸಕ್ಕೆ ಸಹಾಯ ಮಾಡಲೆಂದು ಅಮೆರಿಕದಿಂದ ಬಂದ ಸಿಸ್ಟರ್ ಕ್ರಿಸ್ಟೀನ್ ೧೯೦೩ರಲ್ಲಿ ನಿವೇದಿತಾ ವಿದ್ಯಾಲಯವನ್ನು ಸೇರಿದರು. ಆಕೆ ವಯಸ್ಕ ಮಹಿಳೆಯರಿಗೆ ಅಕ್ಷರಾಭ್ಯಾಸ ಹಾಗೂ ಹೊಲಿಗೆಯನ್ನು ಕಲಿಸುವ ವಿಭಾಗವನ್ನು ಆರಂಭಿಸಿದರು. ನಿವೇದಿತಾ ಹಾಗೂ ಕ್ರಿಸ್ಟೀನ್ ಇಬ್ಬರೂ ಶ್ರೀಮಾತೆ ಶಾರದಾದೇವಿಯವರೊಂದಿಗೆ ನಿಕಟ ಸಂಪರ್ಕವನ್ನು ಇಟ್ಟುಕೊಂಡಿದ್ದರು. ಇದು ನಿವೇದಿತಾರ ದಿನಚರಿಯ ಪುಟಗಳನ್ನು ನೋಡಿದರೆ ಗೊತ್ತಾಗುತ್ತದೆ. ದಿನವೆಲ್ಲಾ ವಿಭಿನ್ನ ಕೆಲಸಗಳಲ್ಲಿ ಮಗ್ನರಾಗಿರುತ್ತಿದ್ದರೂ ನಿವೇದಿತಾ ಸಂಜೆ ಒಮ್ಮೆಯಾದರೂ ಹೋಗಿ ಶ್ರೀಮಾತೆಯ ಚರಣತಲದಲ್ಲಿ ಸಣ್ಣ ಹುಡುಗಿಯಂತೆ ಕುಳಿತುಕೊಳ್ಳುವ ಅವಕಾಶವನ್ನು ಬಿಟ್ಟುಕೊಡುತ್ತಿರಲಿಲ್ಲ. ಶ್ರೀಮಾತೆ ಶಾಲೆಗೆ ಭೇಟಿ ನೀಡುತ್ತಿದ್ದ ದಿನಗಳನ್ನು ನಿವೇದಿತಾ ಹಬ್ಬದಂತೆ ಆಚರಿಸುತ್ತಿದ್ದರು. ಇಂಥ ಒಂದು ದಿನದ ವರ್ಣನೆಯನ್ನು ಶಾಲೆಯ ಒಬ್ಬ ಬಾಲಕಿ ಕೊಡುತ್ತಾಳೆ: "ಒಂದು ದಿನ ಸಿಸ್ಟರ್ ನಮ್ಮನ್ನೆಲ್ಲ ಕರೆದು ಹೇಳಿದರು, 'ಮಾತಾದೇವಿ ಈ ದಿನ ನಮ್ಮ ಶಾಲೆಗೆ ಬರುತ್ತಾರೆ. ನೀವೆಲ್ಲ ಸ್ವಾಗತಿಸಲು ಸಿದ್ಧರಾಗಿ!' ಶ್ರೀಮಾತೆಯ ಜೊತೆ ರಾಧು, ಗೋಲಾಪ್ ಮಾ ಮೊದಲಾದವರು ಕುದುರೆ ಗಾಡಿಯಲ್ಲಿ ಬಂದಿಳಿದರು. ಶ್ರೀಮಾತೆ ಗಾಡಿಯಿಂದ ಇಳಿದೊಡನೆ ಸಿಸ್ಟರ್ ರಸ್ತೆಯಲ್ಲಿಯೇ ಅವರಿಗೆ ಸಾಷ್ಟಾಂಗ ಪ್ರಣಾಮ ಮಾಡಿ ಅವರನ್ನು ಒಳಗೆ ಕರೆದುಕೊಂಡು ಹೋದರು. ನಮ್ಮೆಲ್ಲರ ಕೈಯಲ್ಲಿ ಹೂವು ಕೊಟ್ಟು ಶ್ರೀಮಾತೆಯ ಚರಣಗಳಿಗೆ ಅರ್ಪಿಸುವಂತೆ ಹೇಳಿದರು. ಅನಂತರ ಪ್ರತಿಯೊಬ್ಬ ವಿದ್ಯಾರ್ಥಿನಿಯನ್ನೂ ಶ್ರೀಮಾತೆಗೆ ಪರಿಚಯಿಸಿದರು. ಹುಡುಗಿಯರ ಕೈಕೆಲಸ ಇತ್ಯಾದಿಗಳನ್ನು ನೋಡಿ ಶ್ರೀಮಾತೆ ತುಂಬ ಆನಂದಪಟ್ಟರು."

ಶ್ರೀಮಾತೆ ಬಾಗ್‌ಬಜಾರಿನ ಉದ್ಬೋಧನ ಮನೆಯಲ್ಲಿರುವಾಗ ಒಬ್ಬ ಮಹಿಳೆ ಅವರನ್ನು ಪ್ರಶ್ನಿಸಿದಳು: "ಅಮ್ಮಾ, ಹೆಂಗಸರ ಉನ್ನತಿ ಒಬ್ಬಳು ನಿವೇದಿತಾಳಲ್ಲಿಯೇ ಮುಗಿದುಹೋಗುವುದೇ?" ಶ್ರೀಮಾತೆ ಉತ್ತರಿಸಿದರು: "ಹತಾಶೆಗೆ ಯಾವ ಕಾರಣವೂ ಇಲ್ಲ. ಶ್ರೀರಾಮಕೃಷ್ಣರು ಕೇವಲ ಗಂಡಸರ ಉದ್ಧಾರಕ್ಕೆ ಮಾತ್ರ ಬರಲಿಲ್ಲ. ... ಹೆಂಗಸರಲ್ಲೂ ಮುಕ್ತಿಯ ಅಭಿಲಾಷೆಯುಳ್ಳ ಸಾಧಕಿಯರಿದ್ದಾರೆ. ಮುಂದೆ ಇನ್ನೂ ಅನೇಕರು ಬರಲಿದ್ದಾರೆ.... ರಾಮಕೃಷ್ಣರು ಕೆಲವರನ್ನು ತಮ್ಮ ಕೆಲಸಕ್ಕಾಗಿಯೇ ಕರೆತಂದಿದ್ದಾರೆ...." ಹೀಗೆ ಹೇಳಿ ಆಕೆಗೆ ಒಂದು ಘಟನೆಯನ್ನು ಹೇಳಿದರು: "ಗೋಲಾಪ್ ಮಾಳಿಂದ ಕೇಳಿದೆ, ಶರತ್(ಸ್ವಾಮಿ ಶಾರದಾನಂದರು) ಅವಳಿಗೆ ಹೇಳಿದನಂತೆ: ಸುಧೀರಾ ಒಂದು ದಿನ ರಾತ್ರಿ ಕನಸಿನಲ್ಲಿ ನೋಡಿದ್ದಳಂತೆ, ಶ್ರೀರಾಮಕೃಷ್ಣರು ಒಂದು ಸಭೆಯಲ್ಲಿ ಕುಳಿತಿದ್ದಾರೆ... ವಿಭಿನ್ನ ರೀತಿನೀತಿಗಳ ಜನ ಅವರನ್ನು ಸುತ್ತುವರೆದಿದ್ದಾರೆ. ಸುಧೀರಾಳನ್ನು ಗಮನಿಸಿ ಅವರು ಕೇಳಿದರಂತೆ, 'ನನ್ನದೊಂದು ಕೆಲಸ ಮಾಡಿ ಬರುತ್ತೀಯಾ' ಎಂದು. ಅವಳು ಕೂಡಲೇ ಒಪ್ಪಿಕೊಂಡಳು. ಆಗ ಅವರೆಂದರು, 'ಈ ಬಾಗಿಲಿನಿಂದ ಹೊರಗೆ ಹೋಗು' ಎಂದು. ಈ ಕನಸನ್ನು ವಿವರಿಸುತ್ತಾ ಸುಧೀರಾ ಹೇಳಿದಳು, 'ಆ ಬಾಗಿಲನ್ನು ತೆರೆದೊಡನೇ ಕಂಡಿದ್ದೇನು? ಈ ಸಂಸಾರ!'"

ಸುಧೀರಾಳ ಹುಟ್ಟಿದ್ದು ೧೮.೧೧.೧೮೮೯ರಲ್ಲಿ. ಆಕೆಯ ಮನೆಯವರು ಬ್ರಹ್ಮಸಮಾಜದ ಪ್ರಭಾವಕ್ಕೆ ಒಳಗಾಗಿದ್ದರು. ಸುಧೀರಾ ಬ್ರಾಹ್ಮೊ ಗರ್ಲ್ಸ್ ಸ್ಕೂಲಿನಲ್ಲಿ ಎಂಟನೆಯ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದು ಆಗಿನ ಕಾಲದಲ್ಲಿ ಒಂದು ಹೊಸ ಸುದ್ದಿಯಾಗಿತ್ತು. ಶೈಶವದಲ್ಲಿಯೇ ತಂದೆ ತೀರಿಕೊಂಡಿದ್ದರಿಂದ ಹಿರಿಯ ಅಣ್ಣ ದೇವವ್ರತ ಬಸು ಅಕ್ಕರೆಯಿಂದ ಸುಧೀರಾಳ ಪಾಲನೆ ಮಾಡಿದನು.

ದೇವವ್ರತ ಬಸು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಇಳಿದ ಕ್ರಾಂತಿಕಾರಿ ತರುಣರಲ್ಲಿ ಅಗ್ರಗಣ್ಯನಾಗಿದ್ದು, ಬ್ರಿಟಿಷ್ ಸರ್ಕಾರದ ಕೆಂಗಣ್ಣಿಗೆ ಗುರಿಯಾಗಿದ್ದನು. ಸುಧೀರಾ ಸಹೋದರನ ಈ ಎಲ್ಲ ಚಟುವಟಿಕೆಗಳಲ್ಲಿ ಒಮ್ಮತವುಳ್ಳವಳಾಗಿ ಸಂಪೂರ್ಣ ಸಹಕಾರ ನೀಡುತ್ತಿದ್ದಳು. ಇದರಿಂದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಂಡ ಬಂಗಾಳದ ಮಹಿಳೆಯರ ನಡುವೆ ಸುಧೀರಾಳ ಹೆಸರನ್ನೂ ಉಲ್ಲೇಖಿಸಲಾಗುತ್ತದೆ. ಮನೆಯ ಇಂಥ ವಾತಾವರಣ ಹಾಗೂ ಬ್ರಹ್ಮಸಮಾಜದ ಸ್ವತಂತ್ರ ವಿಚಾರಗಳ ಪ್ರಭಾವಗಳಿಂದ ಸುಧೀರಾ ತನ್ನ ಸುತ್ತಲಿನ ಸಮಾಜದ ಚಿಂತನಾಧಾರೆಗಿಂತ ಬೇರೆಯಾಗಿ ಬೆಳೆದಳು. ಆಕೆಯ ಹದಿನೈದು ವರ್ಷದ ವಯಸ್ಸಿನಲ್ಲಿ ತಾಯಿ ತೀರಿಕೊಂಡರು. ತನ್ನ ಹದಿನಾರನೇ ವಯಸ್ಸಿನಲ್ಲಿ ಜೀವನದ ಬಗ್ಗೆ ಉದಾಸೀನಳಾಗಿ, ಪ್ರಬಲ ವೈರಾಗ್ಯದ ಸೆಳೆತಕ್ಕೆ ಸಿಕ್ಕಿ ಸುಧೀರಾ ತನ್ನ ತಂದೆಯ ಸಂಬಂಧಿ ಹುಡುಗಿಯೊಬ್ಬಳೊಡನೆ ಮನೆಬಿಟ್ಟು ಪುರಿಯತ್ತ ನಡೆದುಕೊಂಡೇ ಹೊರಟಳು. ಈಶ್ವರನಲ್ಲಿ ಶರಣಾಗತಿ ಮತ್ತು ಸ್ವಾವಲಂಬಿ ಮನೋಭಾವ ಅವಳ ವ್ಯಕ್ತಿತ್ವದಲ್ಲಿ ಎದ್ದು ಕಾಣುವ ಗುಣಗಳಾಗಿದ್ದವು.

ದೇವವ್ರತನಲ್ಲಿಯೂ ಕ್ರಮೇಣ ಸ್ವಾತಂತ್ರ್ಯ ಸಂಗ್ರಾಮ, ಸಮಾಜ ಸುಧಾರಣೆ ಇತ್ಯಾದಿ ವಿಚಾರಗಳು ಗೌಣವಾಗಿ, ಭಗವಂತನಿಗಾಗಿ ತೀವ್ರ ವ್ಯಾಕುಲತೆ ಹಾಗೂ ಸಂನ್ಯಾಸ ಜೀವನದತ್ತ ಒಲವು ತೀವ್ರವಾಗತೊಡಗಿದುವು. ಆದರೆ ಆ ದಿಕ್ಕಿನಲ್ಲಿ ಹೆಜ್ಜೆಯಿಡುವ ಮೊದಲು ತನ್ನ ಸಹೋದರಿಯ ಭವಿಷ್ಯ ನಿರಾತಂಕವಾಗುವಂತೆ ವ್ಯವಸ್ಥೆ ಮಾಡಲು ಚಿಂತಿಸಲಾರಂಭಿಸಿದನು. ತನ್ನ ತಂಗಿಯ ಮುಕ್ತ ಮನೋಭಾವ, ಸಮಾಜದ ಶೃಂಖಲೆಗಳಿಗೆ ಬಗ್ಗದ ಸ್ವಭಾವವನ್ನು ಕಂಡು ಆಕೆ ಸಂಸಾರದ ಸಣ್ಣ ವರ್ತುಲದೊಳಗೆ ಸಿಕ್ಕಿಕೊಳ್ಳುವಂಥವಳಲ್ಲ ಎಂದು ದೇವವ್ರತನಿಗೆ ಚೆನ್ನಾಗಿ ಅರಿವಿಗೆ ಬಂದಿತ್ತು. ಹೀಗಾಗಿ ಅವನು ಸುಧೀರಾಳನ್ನು ನಿವೇದಿತಾ ವಿದ್ಯಾಲಯದಲ್ಲಿ ಶಿಕ್ಷಕಿಯಾಗಿ ಸೇರಿಸಿದನು. ಆಗ ಆಕೆಯ ವಯಸ್ಸು ಹದಿನೇಳು.

ಆಗ ನಿವೇದಿತಾ ಕಲ್ಕತ್ತದಲ್ಲಿ ಇರಲಿಲ್ಲ. ಸುಧೀರಾ ಶಾಲೆಯಲ್ಲಿ ಕ್ರಿಸ್ಟೀನಳಿಗೆ ಸಹಾಯಕಳಾಗಿ ನಿಂತಳು. ಸುಧೀರಾಳ ಕಾಯಕ ನಿಷ್ಠೆ, ನೇರಸ್ವಭಾವ, ವೈರಾಗ್ಯಭಾವಗಳನ್ನು ಕಂಡು ಕ್ರಿಸ್ಟೀನಳಿಗೆ ಅತ್ಯಂತ ಮೆಚ್ಚುಗೆಯಾಯಿತು. ವಯಸ್ಸಾದ ಮಹಿಳೆಯರಿಗೆ ಬಂಗಾಳಿ ಹಾಗೂ ಭಗವದ್ಗೀತೆಗಳನ್ನು ಕಲಿಸುವ ಭಾರವನ್ನು ಅವರು ಸುಧೀರಾಳಿಗೆ ವಹಿಸಿದರು. ಸುಧೀರಾ ನೋಡಲು ಲಕ್ಷಣವಾಗಿರಲಿಲ್ಲ. ಆದರೆ ಬಹುಬೇಗ ಆಕೆ ವಿದ್ಯಾರ್ಥಿನಿಯರ ಮನಸ್ಸನ್ನು ಗೆದ್ದಳು. ಸಿಸ್ಟರ್ ನಿವೇದಿತಾರ ವಿದ್ಯಾರ್ಥಿನಿ ಸರಳಾ ಬಾಲಾ ಸರ್ಕಾರ್ ಬರೆಯುತ್ತಾರೆ: "ನನಗೆ ಸ್ಕೂಲಿನಲ್ಲಿದ್ದೇನೆ ಎಂಬ ಭಾವನೆಯೇ ಬರುತ್ತಿರಲಿಲ್ಲ. ಮನೆಯಲ್ಲಿ ಅಕ್ಕತಂಗಿಯರೊಂದಿಗೆ ಆಟಪಾಟಗಳಲ್ಲಿ ಮಗ್ನವಾಗಿರುವಂತಿತ್ತು ಅಲ್ಲಿಯ ವಾತಾವರಣ. ಹುಡುಗಿಯರು ಸುಧೀರಾ ಅವರನ್ನು ಸ್ವಂತ ಅಕ್ಕನಂತೆ ಕಾಣುತ್ತಿದ್ದರು. ಸುಧೀರಾ ಕೂಡ ಎಲ್ಲರೊಂದಿಗೆ ಒಂದಾಗಿ ಬೆರೆಯುತ್ತಿದ್ದರು. ಖಾಯಿಲೆ ಬಂದು ಮಲಗಿದ ಹುಡುಗಿಯೊಬ್ಬಳನ್ನು ಸುಧೀರಾ ತ್ರಿಕರಣಪೂರ್ವಕವಾಗಿ ಸೇವೆ ಮಾಡಿದ್ದು ಕಂಡು ನಾವು ಮುಗ್ಧರಾಗಿ ಹೋಗಿದ್ದೆವು..." ಮತ್ತೊಬ್ಬ ವಿದ್ಯಾರ್ಥಿನಿ ಸರಳಾದೇವಿ ಬರೆಯುತ್ತಾರೆ: "....ಸ್ಕೂಲ್ ಹಾಗೂ ಸುಧೀರಾ ದೀ(ಅಕ್ಕ) ಇಬ್ಬರನ್ನು ಬಿಟ್ಟರೆ ನನಗೆ ಇನ್ನಾವುದರಲ್ಲೂ ಮನಸ್ಸಿರಲಿಲ್ಲ. ಸುಧೀರಾ ದೀಗೆ ಇತರರನ್ನು ವಶಮಾಡಿಕೊಳ್ಳುವ ಮಂತ್ರ ಗೊತ್ತಿತ್ತೋ ಏನೋ! ಅವರ ಬಳಿ ಹೋದವರೆಲ್ಲಾ ಅವರಿಗೆ ವಶರಾಗಿಬಿಡುತ್ತಿದ್ದರು.... ಅವರು ಹೇಳಿದರೆ ನಾವು ಹುಲಿಯ ಎದುರಿಗೆ ಹೋಗಿ ನಿಲ್ಲಲೂ ಸಿದ್ಧರಾಗಿರುತ್ತಿದ್ದೆವು. ಅವರು ಜಗತ್ತಿನ ನಿಂದೆಗಳನ್ನು ಲೆಕ್ಕಿಸುತ್ತಿರಲಿಲ್ಲ. ಎಷ್ಟೇ ಅಡಚಣೆ ಬರಲಿ ಹಿಡಿದ ಕೆಲಸವನ್ನು ಸಾಧಿಸಿಯೇ ಬಿಡುತ್ತಿದ್ದರು."

ವಿದ್ಯಾರ್ಥಿನಿಯರನ್ನು ಸುಧೀರಾ ವಿಭಿನ್ನ ಸ್ಥಳಗಳಿಗೆ ಪ್ರವಾಸಕ್ಕೆ ಕರೆದುಕೊಂಡು ಹೋಗುತ್ತಿದ್ದರು. ಮನೆಗಳಿಂದ ಎಂದೂ ಹೊರಬರದ ಮಹಿಳೆಯರು ಹೊರಜಗತ್ತನ್ನು ನಿರ್ಭಯರಾಗಿ ಎದುರಿಸುವಂತಾಗಲಿ ಎಂಬುದೇ ಅವರ ಉದ್ದೇಶವಾಗಿತ್ತು.

೧೯೧೪ರಲ್ಲಿ ಸುಧೀರಾರ ಜೀವನದಲ್ಲಿ ಮತ್ತೊಂದು ಮಹತ್ತರ ಪರಿವರ್ತನೆಯಾಯಿತು. ೧೯೧೮ರಲ್ಲಿ ಶ್ರೀ ಅರವಿಂದ ಘೋಷರ ನೇತೃತ್ವದಲ್ಲಿ ಬ್ರಿಟಿಷ್ ಸರ್ಕಾರದ ವಿರುದ್ಧ ಬಾಂಬನ್ನು ಸ್ಫೋಟಿಸಿ ದೊಂಬಿಯನ್ನು ಎಬ್ಬಿಸಿದ ಅಪರಾಧಕ್ಕಾಗಿ ಬಂದಿಯಾಗಿದ್ದ ದೇವವ್ರತ ಬಸು ೧೯೧೪ರಲ್ಲಿ ಜೈಲಿನಿಂದ ಹೊರಬಂದವರು ಶ್ರೀಮಾತೆ ಶಾರದಾದೇವಿಯವರಿಂದ ದೀಕ್ಷೆ ಪಡೆದು ರಾಮಕೃಷ್ಣ ಮಠಕ್ಕೆ ಸೇರಿ ಸ್ವಾಮಿ ಪ್ರಜ್ಞಾನಂದರಾದರು. ಸಹೋದರನ ಜೀವನದಲ್ಲಾದ ಈ ಪರಿವರ್ತನೆ ಸುಧೀರಾರನ್ನು ಚಕಿತಗೊಳಿಸಿತು. ಇದೇ ಸಮಯದಲ್ಲಿ ಆಕೆಯ ಆತ್ಮೀಯ ಗೆಳತಿಯೊಬ್ಬಳು ತೀರಿಕೊಂಡಳು. ಈ ಎರಡು ಘಟನೆಗಳಿಂದ ಜೀವನದಲ್ಲಿ ತಾನು ಒಬ್ಬಂಟಿ ಎಂಬ ಭಾವನೆ ಅವರ ಮನಸ್ಸನ್ನು ಆಕ್ರಮಿಸಿತು. ತಮ್ಮ ಜೀವನದಲ್ಲಿ ಎದುರಾದ ಈ ಸಮಸ್ಯೆಯನ್ನು ಕುರಿತು ಸುಧೀರಾ ಒಂದು ಪತ್ರದಲ್ಲಿ ಬರೆಯುತ್ತಾರೆ: ".....ದಿನವೆಲ್ಲ ಸ್ಕೂಲಿನಲ್ಲಿ ಸಮಯ ಹೇಗೋ ಕಳೆದುಹೋಗುತ್ತಿತ್ತು. ರಾತ್ರಿ ಮನೆಯಲ್ಲಿ ನಾನೊಬ್ಬಳೇ. ನನ್ನ ಮನಸ್ಸಿನ ಅವಸ್ಥೆ ಹೇಗಿತ್ತೆಂದು ಊಹಿಸಿಕೋ. ಈ ಸಮಯದಲ್ಲಿ 'ಮೇಮ್' (ಮೇಡಂ ನಿವೇದಿತಾ) ಕೇಳಿದರು, 'ಸುಧೀರಾ, ಮಾತಾದೇವಿ ಕಲ್ಕತ್ತಕ್ಕೆ ಬಂದಿದ್ದಾರೆ. ನೋಡಿ ಬರೋಣ, ಬರುತ್ತೀಯಾ' ಎಂದು. ನಿವೇದಿತಾರ ಈ ಮಾತಾದೇವಿ ಯಾರೆಂದು ನನಗೆ ಗೊತ್ತಿರಲಿಲ್ಲ. ಸ್ಕೂಲಿನ ಕೆಲ ವಿದ್ಯಾರ್ಥಿನಿಯರೊಂದಿಗೆ ಮತ್ತು ಮೇಮ್‌ರೊಡನೆ ಹೋದೆ. ಇದೇ ಶ್ರೀಮಾತೆಯವರೊಂದಿಗೆ ನನ್ನ ಮೊದಲ ಭೇಟಿ. ಹದಿನೈದು ನಿಮಿಷ ಅವರೊಂದಿಗಿದ್ದೆವು. ಸ್ವದೇಶಿ ಆಂದೋಲನದ ಬಗ್ಗೆ ಮಾತು ಆರಂಭವಾಯಿತು. ನಾನೇ ಈ ವಿಚಾರವಾಗಿ ಹೆಚ್ಚಾಗಿ ಮಾತನಾಡಿದೆ. ಅವರು ಎಲ್ಲವನ್ನೂ ಆಲಿಸಿ ಒಂದೆರಡು ಉತ್ತರವಿತ್ತರು. ಆ ದಿನವೇ ನನಗೆ ತಿಳಿದದ್ದು ಅವರು ಪರಮಹಂಸದೇವರ ಸಹಧರ್ಮಿಣಿ ಎಂದು."

ಸುಧೀರಾ ಮೂರ್ತಿಪೂಜೆಯನ್ನು ಮೊದಮೊದಲು ಒಪ್ಪ

ತ್ತಿರಲಿಲ್ಲ, ಯಾವುದೇ ಆಚಾರ, ಸಂಪ್ರದಾಯಗಳ ಹತ್ತಿರ ಸುಳಿಯುತ್ತಿರಲಿಲ್ಲ. ಸಹೋದರನ ಸಂನ್ಯಾಸ ಸ್ವೀಕಾರದನಂತರ ಆಕೆಯ ಆಧ್ಯಾತ್ಮಿಕ ಭಾವನೆಗಳು ಹೊಸ ಬೆಳಕನ್ನು ಕಂಡವು. ೧೯೧೧ರಲ್ಲಿ ಆಕೆ ಶ್ರೀಮಾತೆಯಿಂದ ಮಂತ್ರದೀಕ್ಷೆ ಪಡೆದರು. ಅವರ ಆದೇಶದಂತೆ ತಮ್ಮ ಕೆಲಸಗಳ ಜೊತೆಯಲ್ಲಿಯೇ ಜಪ ಧ್ಯಾನಗಳನ್ನು ನಿಷ್ಠೆಯಿಂದ ಮಾಡಲು ಆರಂಭಿಸಿದರು. ಸುಧೀರಾ ತಮ್ಮ ಸ್ನೇಹಿತೆಯೊಬ್ಬಳಿಗೆ ಬರೆಯುತ್ತಾರೆ: "... ಶ್ರೀಮಾತೆ ಎಂತಹ ವ್ಯಕ್ತಿ ಎಂದು ಹೇಗೆ ವಿವರಿಸಲಿ! ಅವರ ಸ್ಮರಣೆ ನಮ್ಮನ್ನು ಯಾವ ಮಟ್ಟಕ್ಕೆ ಎತ್ತಬಲ್ಲದೆಂದು ಅರ್ಥಮಾಡಿಸುವ ಶಕ್ತಿ ನನ್ನಲ್ಲಿಲ್ಲ ..... ಎಂತೆಂಥ ಭಕ್ತರು, ಯೋಗಿಗಳು ಬಹು ತಪಸ್ಸಿನಿಂದಲೂ ಯಾರ ದರ್ಶನವನ್ನು ಪಡೆಯಲಾರರೋ ಅಂತಹ ದೇವಿಯ ಚರಣದಲ್ಲಿ ನಾವು ಆಶ್ರಯ ಪಡೆದಿದ್ದೇವೆ."

ಇಲ್ಲಿಂದ ಮುಂದೆ ಸುಧೀರಾ ಅವರು ಪ್ರಚಂಡ ಕರ್ಮತತ್ಪರತೆಯ ಜೊತೆಗೆ ಭಗವದ್ವ್ಯಾಕುಲತೆಯಿಂದ ನಿರ್ಜನ ಪ್ರದೇಶಗಳಲ್ಲಿ ಕುಳಿತು ಜಪಧ್ಯಾನಗಳಲ್ಲಿ ತನ್ಮಯರಾಗುತ್ತಿದ್ದುದನ್ನು ಗಮನಿಸಬಹುದಾಗಿತ್ತು. ಈ ಸ್ವಭಾವ ಆಕೆಯನ್ನು ಶ್ರೀಮಾತೆ ಹಾಗೂ ಸ್ವಾಮಿ ಶಾರದಾನಂದರ ಮೆಚ್ಚುಗೆಗೆ ಪಾತ್ರಳನ್ನಾಗಿ ಮಾಡಿತು. ಸ್ವಾಮಿ ಶಾರದಾನಂದರು ಸುಧೀರಾರನ್ನು **ಆತ್ಮನೋ ಮೋಕ್ಷಾರ್ಥಂ ಜಗತ್ ಹಿತಾಯ ಚ** ಎಂಬ ಮಹಾವಾಕ್ಯದ ವ್ರತಧಾರಿಣಿ ಎಂದು ಕರೆದಿದ್ದಾರೆ. ಕಲ್ಕತ್ತದ ಹೊರಗೆ ಸೇವಾಕಾರ್ಯಕ್ಕೆ ಹೋಗಿದ್ದ ಅವರು ರಸ್ತೆಯಲ್ಲಿ ಸಿಕ್ಕ 'ಭೂತಿ' ಎಂಬ ಅನಾಥ ಬಾಲಕಿಯನ್ನು ಸುಧೀರಾರ ಕೈಗೆ ಒಪ್ಪಿಸಿದರು. ಶ್ರೀಮಾತೆಯವರಿಗೂ ತಮ್ಮ ಈ ಪ್ರೀತಿಯ ಮಗಳ ಭವಿಷ್ಯದ ಬಗ್ಗೆ ಬಹು ನಿರೀಕ್ಷೆ. ಸುಧೀರಾರ ಆರೋಗ್ಯ ಕೆಟ್ಟರೆ ಅವರು ಚಿಂತೆಯಿಂದ ಚಡಪಡಿಸುತ್ತಿದ್ದರು. ನಿವೇದಿತಾ ಸ್ಕೂಲಿನಿಂದ ಯಾರಾದರೂ ಬಂದರೆ ಸಾಕು ಮೊದಲು ಸುಧೀರಾರನ್ನು ಕುರಿತು ವಿಚಾರಿಸುತ್ತಿದ್ದರು. ತಮ್ಮ ಬಳಿ ಬರುವ ಮಹಿಳೆಯರ ಎದುರು ಅವರು ಸುಧೀರಾರನ್ನು ತುಂಬ ಪ್ರಶಂಸಿಸುತ್ತಾ ಹೇಳುತ್ತಿದ್ದರು, "....ಸ್ಕೂಲಿನಲ್ಲಿ ಹಣದ ತೊಂದರೆ ಇದ್ದಾಗ ಸುಧೀರಾ ಶ್ರೀಮಂತರ ಮನೆಯ ಮಕ್ಕಳಿಗೆ ಸಂಗೀತ ಕಲಿಸಿ ತಿಂಗಳಿಗೆ ೪೦-೫೦ ರೂ. ಸಂಪಾದಿಸುತ್ತಾಳೆ. ತನ್ನ ವಿದ್ಯಾರ್ಥಿನಿಯರಿಗೂ ಶಾಲೆಯಲ್ಲಿ ಉಪಯುಕ್ತ ಕೈಕೆಲಸಗಳನ್ನು ಕಲಿಸುತ್ತಾಳೆ. ರಜದಲ್ಲಿ ಅವರನ್ನೆಲ್ಲ ಕರೆದುಕೊಂಡು ತಿರುಗಾಡಲು ಹೋಗುತ್ತಾಳೆ... ಸುಧೀರಾ ದೇವವ್ರತನ ತಂಗಿ. ಒಬ್ಬಳೇ ಹೋಗಿ ಸ್ಟೇಷನ್ನಿನಲ್ಲಿ ಟಿಕೇಟ್ ಕೊಳ್ಳುವುದು, ರೈಲಿನಲ್ಲಿ ಓಡಾಡುವುದು ಎಲ್ಲವನ್ನೂ ದೇವವ್ರತನೇ ತಂಗಿಗೆ ಕಲಿಸಿದ್ದಾನೆ."

ಸುಧೀರಾರ ಈ ಸಹೋದರ ಆಕೆಗೆ ಕೇವಲ ಲೌಕಿಕ ಜೀವನದಲ್ಲಿ ಮುಂದುವರೆಯಲು ಸಹಾಯಕರಾಗಿದ್ದುದು ಮಾತ್ರವಲ್ಲ, ಆಕೆಯ ಆಧ್ಯಾತ್ಮಿಕ ಉನ್ನತಿಗಾಗಿಯೂ ಅಮೂಲ್ಯ ಸಲಹೆಗಳನ್ನು ಆಗಾಗ ನೀಡುತ್ತಿದ್ದರು. ಒಮ್ಮೆ ತಮ್ಮ ಆಧ್ಯಾತ್ಮಿಕ ಸಾಧನೆಯ ಪಥದಲ್ಲಿ ಇರುವ ಅಡಚಣೆಗಳನ್ನು ತೋಡಿಕೊಂಡು ಸುಧೀರಾ ಬರೆದ ಪತ್ರಕ್ಕೆ ಸಹೋದರನಿಂದ ಅತಿ ಸ್ವಾರಸ್ಯಕರವಾದ ಕೆಳಕಂಡ ಉತ್ತರ ಬಂದಿತು :

ಅದ್ವೈತ ಆಶ್ರಮ,
ಮಾಯಾವತಿ
೨೧.೧೧.೧೯೧೪

ಸುಧೀರಾ,

ಭಗವಂತನನ್ನು ಪ್ರೀತಿಸಲು ನಮಗೆ ಬೇಕಾದ ಗುಣಗಳಲ್ಲಿ ಒಂದು ಅದಮ್ಯ ಸಹನೆ. ಈ ಸಹನೆ ಹೃದಯವನ್ನು ವಿಶಾಲಗೊಳಿಸುತ್ತದೆ. ಅಂತರಂಗದ ಶಕ್ತಿಯನ್ನು ವರ್ಧಿಸುತ್ತದೆ. ಇಂತಹ ಸಹನೆ ಇಲ್ಲದಿದ್ದರೆ ಭಗವಂತನಂಥ ಮಹತ್ ಶಕ್ತಿಯನ್ನು ಪ್ರೀತಿಸಲು ಹೇಗೆ ಸಾಧ್ಯ? "ಅಯ್ಯೋ, ನನ್ನ ಸಮಯವೆಲ್ಲಾ ಹಾಳಾಯಿತು...." ಎಂದು ಸ್ವಲ್ಪ ಹೊತ್ತು ಅತ್ತು ಕರೆದನಂತರ ಅನೇಕರ ವ್ಯಾಕುಲತೆ ಇಲ್ಲೇ ತಣ್ಣಗಾಗಿಬಿಡುತ್ತದೆ.... ಯಾವಾಗಲೂ ಎಲ್ಲ ಕೆಲಸಗಳ ನಡುವೆ ಮನಸ್ಸಿನಲ್ಲಿ ಸರ್ವದಾ ಒಂದು ದೃಢ ಪ್ರತಿಜ್ಞೆ ಮಾಡಿಕೊಳ್ಳುತ್ತಿರಬೇಕು. "ಆಧ್ಯಾತ್ಮಿಕ ಅನುಭವಗಳು ಸಿಗಲಿ ಅಥವಾ ಬಿಡಲಿ, ನಾನು ಭಗವತ್ ಪ್ರೇಮದಿಂದ ಎಲ್ಲ ಕೆಲಸಗಳನ್ನೂ ಮಾಡಿಕೊಂಡು ಹೋಗುತ್ತೇನೆ. ಆತನ ಪ್ರೀತಿಗಾಗಿ ಎಲ್ಲರನ್ನೂ ಪ್ರೀತಿಸುತ್ತೇನೆ... ಮನಸ್ಸನ್ನು ಗಮನಿಸಿ ಕಾಮ, ಕ್ರೋಧಗಳ ತಾಂಡವವನ್ನು ಕಡಿಮೆ ಮಾಡಲು ಯತ್ನಿಸುತ್ತೇನೆ. ಏನಾದರಾಗಲಿ ಭಗವತ್ಪ್ರೇಮ ರಸದಲ್ಲಿ ನಾನು ಮುಳುಗಿ ಒಂದಾಗಿ ಹೋಗುತ್ತೇನೆ" ಎಂಬ ಸಂಕಲ್ಪವನ್ನು ಬಿಡಬೇಡ.

ಇತಿ ಆಶೀರ್ವಾದಗಳೊಂದಿಗೆ,
ಪ್ರಜ್ಞಾನಂದ

(ಮುಂದುವರಿಯುತ್ತದೆ)

## ಆಶ್ರಮದ ಕಾರ್ಯಕ್ರಮಗಳು

### ಅಕ್ಟೋಬರ್ 2004

| | | |
|---|---|---|
| ಸ್ವಾಮಿ ಅಭೇದಾನಂದ ಜಯಂತಿ | 7 | ಗುರುವಾರ |
| ಏಕಾದಶಿ | 10 | ಭಾನುವಾರ |
| ಸ್ವಾಮಿ ಅಖಂಡಾನಂದ ಜಯಂತಿ | 14 | ಗುರುವಾರ |
| ದುರ್ಗಾಪೂಜಾ ಮಹಾಸಪ್ತಮಿ | 20 | ಬುಧವಾರ |
| ದುರ್ಗಾಪೂಜಾ ಮಹಾಷ್ಟಮಿ | 21 | ಗುರುವಾರ |
| ದುರ್ಗಾಪೂಜಾ ಮಹಾನವಮಿ | 22 | ಶುಕ್ರವಾರ |
| ವಿಜಯದಶಮಿ / ಮಧ್ವ ಜಯಂತಿ | 23 | ಶನಿವಾರ |
| ಏಕಾದಶಿ | 24 | ಭಾನುವಾರ |